ಶಹಾಪುರ ತಾಲ್ಲೂಕಿನ ಭೀಮರಾಯನ ಗುಡಿಯಲ್ಲಿ ನವೋದಯ ಶಾಲೆ

೩೬೬. ಶಿವಶೇಖರಗೌಡ ಶಿರವಾಳ (ಶಹಾಪುರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಹಾಪುರ ತಾಲ್ಲೂಕಿನ ಭೀಮರಾಯನ ಗುಡಿಯಲ್ಲಿ ನವೋದಯ ಶಾಲೆಯನ್ನು ಪ್ರಾರಂಭಿಸಿರುವುದು ನಿಜವಲ್ಲವೆ.

ಆ) ಇದಕ್ಕೆ ಬೇಕಾದ ಅರಣ್ಯ ಇಲಾಖೆಗೆ ಸೇರಿದ ಜಮೀನನ್ನು ಆಯ್ಕೆ ಮಾಡಿರುವುದು ನಿಜವಲ್ಲವೆ ?

ಇ) ಹಾಗಿದ್ದಲ್ಲಿ, ಸದರಿ ಜಮೀನನ್ನು ನವೋದಯ ಶಾಲೆಗೆ ವಹಿಸಿ ಕೊಡುವಲ್ಲಿ ಸರಕಾರಕ್ಕೆ ಇರುವ ತೊಂದರೆಗಳೇನು ?

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಮಂತ್ರಿಗಳು).—

ಅ) ನಿಜ.

ಆ) ನಿಜ.

ಇ) ಆಯ್ಕೆ ಮಾಡಿರುವ ಭೂಮಿಯು ಅರಣ್ಯ ಇಲಾಖೆಗೆ ಸೇರಿರುತ್ತದೆ. ಆದಕಾರಣ ಕೇಂದ್ರ ಸರ್ಕಾರದ ಅನುಮತಿಯು ಅಗತ್ಯವಿದೆ, ಕೇಂದ್ರಕ್ಕೆ ಈ ಬಗ್ಗೆ ಪತ್ರ ಬರೆದಿದ್ದೂ ಅನುಮತಿಯೂ ಸದ್ಯದಲ್ಲೇ ದೊರಕುವುದೆಂದು ನೀರೀಕ್ಷಿಸಲಾಗಿದೆ.

ಶ್ರೀ ಶಿವಶೇಖರಗೌಡ ಶಿರವಾಳ.—ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಗಳು ನಿಜವೆಂದೂ ಹಾಗೂ ಕೇಂದ್ರ ಸರ್ಕಾರಕ್ಕೆ ಅನುಮತಿಗಾಗಿ ಕಳುಹಿಸಿದ್ದೇವೆಂದು ಹೇಳಿದ್ದಾರೆ. ಈ ಶಾಲೆಗೆ ಜಮೀನು ವಹಿಸಿ ಕೊಡುವುದರ ಬಗ್ಗೆ ೨ ವರ್ಷಗಳಿಂದಲೂ ವಿಳಂಬವಾಗುತ್ತಿರಲು ಕಾರಣವೇನು ? ಶಾಲೆ ಪ್ರಾರಂಭವಾಗಿ ೨ ವರ್ಷಗಳಾಗಿದ್ದರೂ ಭೂಮಿ ಕೊಡದಿರಲು ಕಾರಣವೇನು ? ಕೇಂದ್ರದವರು ಈಗಾಗಲೇ ೨ ಕೋಟಿ ರೂಪಾಯಿಗಳ ಪ್ಲಾನ್ ತಯಾರು ಮಾಡಿದ್ದು ಇಲ್ಲಿಗೆ ೨೦ ಲಕ್ಷ ರೂಪಾಯಿ ಕೊಡಲು ತಯಾರಿದ್ದಾರೆ ಈ ಹಣ ವಾಪಸ್ಸು ಹೋಗುವುದಕ್ಕೆ ಬಿಡದೇ ಇದನ್ನು ಉಪಯೋಗಿಸಿಕೊಳ್ಳಬೇಕಾಗುತ್ತೆದೆ ಸರ್ಕಾರ ಆದಷ್ಟು ಬೇಗ ಅನುಮತಿ ತರಿಸಿಕೊಂಡು ಕೆಲಸ ಪ್ರಾರಂಭ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಅಧ್ಯಕ್ಷರೇ, ಅವರಿಗೆ ಸುಮಾರು ೩೦ ಎಕರೆ ಜಮೀನು ಬೇಕಾಗಿದ್ದು ಬೇರೆ ಕಡೆ ಜಮೀನು ಸಿಗದೇ ಇರುವುದರಿಂದ ಅರಣ್ಯ ಇಲಾಖೆಯ ಜಮೀನನ್ನು ತೆಗೆದುಕೊಂಡು ಇವರಿಗೆ ಕೊಡಬೇಕೆಂದು ಇಚ್ಛೆ ಇದ್ದು ಈಗ ಕೇಂದ್ರಸರ್ಕಾರದವರ ಜೊತೆ ಸಂಪರ್ಕ ಮಾಡಿದ್ದೇವೆ. ಅವರಿಂದ ಒಪ್ಪಿಗೆ ಸಿಗುವ ಸೂಚನೆಗಳು ಇರುವುದರಿಂದ ಆದಷ್ಟು ಬೇಗ ಪ್ರಯತ್ನ ಮಾಡಿ ಕೆಲಸ ಮಾಡೋಣವೆಂದು ಹೇಳುತ್ತೇನೆ.

ಅಧ್ಯಕ್ಷರು.—ಮಾನ್ಯ ಜ್ಞಾನದೇವ ದೊಡ್ಡಮೇಟಿಯವರ ಪ್ರಶ್ನೆಗೆ ಕಾಲಾವಕಾಶ ಕೇಳಿದ್ದು ಅದನ್ನು ನೀಡಲಾಗಿದೆ. ಮಾನ್ಯ ಓಂಕಾರ ಎಂ.ಆರ್ತಿಯವರು ಗೈರುಹಾಜರಾಗಿದ್ದಾರೆ. ಈಗ ಮಾನ್ಯ ರಾಜೂಗೌಡರು ತಮ್ಮ ಪ್ರಶ್ನೆ ಕೇಳಬಹುದು.

ಅರಣ್ಯ ಇಲಾಖೆಯವರು ಕಳ್ಳ ಸಾಗಣಿಕೆಯಿಂದ ವಶಪಡಿಸಿಕೊಂಡ ವಾಹನಗಳು

೩೬೭. ಶ್ರೀ ಬಿ. ರಾಜೂಗೌಡ (ಹನೂರು).—ಮಾನ್ಯ ವ್ಯವಸಾಯ ಮತ್ತು ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೬-೮೭, ೮೭-೮೮ ಮತ್ತು ೧೯೮೮-೮೯ರ ಜನವರಿವರೆಗೆ ರಾಜ್ಯದಲ್ಲಿ ಎಷ್ಟುವೆಲ್ಲದ ಗಂಧದ ಕಟ್ಟಿಗೆಯನ್ನು ಯಾವ ಯಾವ ಜಿಲ್ಲೆಯಲ್ಲಿ ಅರಣ್ಯ ಇಲಾಖೆ ಸಿಬ್ಬಂದಿಯವರು ಕಳ್ಳ ಸಾಗಾಣಿಕೆದಾರರಿಂದ ವಶಪಡಿಸಿಕೊಂಡಿದ್ದಾರೆ ?

ಆ) ಕಳ್ಳ ಸಾಗಾಣಿಕೆದಾರರಿಂದ ವಶಪಡಿಸಿಕೊಂಡ ವಾಹನಗಳ ಸಂಖ್ಯೆ ಎಷ್ಟು ?

ಶ್ರೀ ಬಿ. ರಾಚಯ್ಯ (ವ್ಯವಸಾಯ ಮತ್ತು ಅರಣ್ಯ ಮಂತ್ರಿಗಳು).—

ಅ) ಡಿಸೆಂಬರ್ ೮೮ರವರೆಗೆ ವಿವರಗಳನ್ನು ಪಟ್ಟಿಯಲ್ಲಿ ನಮೂದಿಸಿದೆ.

ಆ) ಡಿಸೆಂಬರ್ ೮೮ರವರೆಗೆ ವಿವರಗಳನ್ನು ಲಗತ್ತಿಸಿದ ಪಟ್ಟಿಯಲ್ಲಿ ನಮೂದಿಸಿದೆ.

೧-೪-೧೯೬೬ ರಿಂದ ೩೧-೧೨-೧೯೮೮ರ ಅಂತ್ಯದವರೆಗೆ ಗಂಧಕ್ಕೆ ಸಂಬಂಧಿಸಿದ ವಶಪಡಿಸಿಕೊಂಡ ಮಾಲಿನ ಮೊತ್ತ (ಜಿಲ್ಲಾವಾರುಗಳಲ್ಲಿ)

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	೧೯೮೬-೮೭	೧೯೮೭-೮೮	೧೯೮೮-೮೯
		ವಶಪಡಿಸಿಕೊಂಡ ಗಂಧದ ಮೌಲ್ಯ ರೂ.ಗಳಲ್ಲಿ	ವಶಪಡಿಸಿಕೊಂಡ ಗಂಧದ ಮೌಲ್ಯ ರೂ.ಗಳಲ್ಲಿ	ವಶಪಡಿಸಿಕೊಂಡ ಗಂಧದ ಮೌಲ್ಯ ರೂ.ಗಳಲ್ಲಿ
೧	ಬೆಂಗಳೂರು ಗ್ರಾಮಾಂತರ	೧೩,೬೧,೮೨೮.೦೦	೨,೫೦,೪೬೦.೦೦	೬,೪೫,೩೬೪.೦೦
೨	ಬೆಂಗಳೂರು ನಗರ	೩,೯೬,೯೮೮.೦೦	೧೧,೨೨,೭೪೨.೦೦	೧೨,೬೫,೬೦೦.೦೦
೩	ಕೋಲಾರ	೨,೪೭,೪೦೦.೦೦	೪.೦೦,೩೬೦ ೦೦	...
೪	ಉತ್ತರ ಕನ್ನಡ	೧,೫೨,೯೨೭,೦೦	೫೫,೭೬೫,೦೦	೨೮,೩೪೮,೦೦
೫	ಧಾರವಾಡ	೫೦,೫೮,೯೯೮.೦೦	೭೧,೨೧,೪೭೦.೦೦	೨,೭೮,೫೭೦.೦೦
೬	ಬೆಳಗಾಂ	೧೪,೪೮ ೪೭೨.೦೦	೮,೭೨ ೯೧೪.೦೦	೪೧,೮೦೦.೦೦
೭	ಬಿಜಾಪುರ	೨,೮೦,೦೨೮.೦೦	೧೫,೭೬,೮೦೦.೦೦	೨೭,೦೪೦.೦೦
೮	ಶಿವಮೊಗ್ಗ	೭೪,೦೨.೮೮೫.೦೦	೬೯,೮೮,೫೬೦.೦೦	೯೮,೭೯,೪೦.೦೦
೯	ಚಿಕ್ಕಮಗಳೂರು	೯,೮೨,೨೮೦.೦೦	೮.೦೦,೪೦೦.೦೦	೧೦ ೮೬,೧೫೮.೦೦
೧೦	ಮೈಸೂರು	೪,೭೭,೯೦೭.೦೦	೧೩,೪೨,೧೩೬.೦೦	೧೧,೯೫,೭೦೦.೦೦
೧೧	ಮಂಡ್ಯ	೪೦,೪೦೧.೦೦	೮೫,೦೦೨,೦೦	೫೬.೫೨೩ ೦೦
೧೨	ಕೊಡಗು	೧,೨೩,೭೨೧ ೦೦	೩,೧೭,೪೩೧ ೦೦	೯,೯೨ ೪೪೫.೦೦
೧೩	ದಕ್ಷಿಣ ಕನ್ನಡ	೩,೬೬,೪೬೦.೦೦	೭೩,೭೪೩.೦೦	೮೩,೯೦೦.೦೦
೧೪	ಹಾಸನ	೪,೨೦,೨೫೦.೦೦	೧೨,೫೦,೪೬೮.೦೦	೭,೭೯,೮೦೦.೦೦
೧೫	ಬಳ್ಳಾರಿ	೬,೨೭,೪೮೬.೦೦	೧೨,೨೧,೬೭೮.೦೦	೪,೩೫,೦೦೦.೦೦
೧೬	ಚಿತ್ರದುರ್ಗ	೮೩,೬೦೦.೦೦	೬೭.೨೭೮,೦೦	೩೦,೦೦೦.೦೦
೧೭	ರಾಯಚೂರು	೩,೫೭೦.೦೦	೨,೫೨,೪೨೩.೦೦	...
೧೮	ತುಮಕೂರು	೪೬,೨೯೦.೦೦	೫೩,೬೪೩.೦೦	೧೦ ೫೬೦.೦೦
೧೯	ಗುಲ್ಬರ್ಗಾ	...	...	...
೨೦	ಬೀದರ್	೭೫೦.೦೦	...	...
	ಒಟ್ಟು	೧,೯೫,೮೨,೨೪೧.೦೦	೩,೬೦,೩೩,೨೩೫.೦೦	೧,೬೮,೩೬,೨೪೮.೦೦

೧-೪-೧೯೮೬ ರಿಂದ ೩೧-೧೨-೧೯೮೮ರ ಅಂತ್ಯದವರಿಗೆ ಗಂಧಕ್ಕೆ ಸಂಬಂಧಿಸಿದ ವಶಪಡಿಸಿಕೊಂಡ ವಾಹನಗಳ ವಿವರ (ಜಿಲ್ಲಾವಾರುಗಳಲ್ಲಿ).

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	೧೯೮೬-೮೭ ವಶಪಡಿಸಿಕೊಂಡ ವಾಹನಗಳ ಸಂಖ್ಯೆ	೧೯೮೭-೮೮ ವಶಪಡಿಸಿಕೊಂಡ ವಾಹನಗಳ ಸಂಖ್ಯೆ	೧೯೮೮-೮೯ ವಶಪಡಿಸಿಕೊಂಡ ವಾಹನಗಳ ಸಂಖ್ಯೆ
೧	ಬೆಂಗಳೂರು ಗ್ರಾಮಾಂತರ	೭೩	೩೯೮	೫೫೧
೨	ಬೆಂಗಳೂರು ನಗರ	೧೮೦	೧೯೧	೧೩
೩	ಕೋಲಾರ	೯೯	೫	೧೪೩೭
೪	ಉತ್ತರ ಕನ್ನಡ	೨೬೨	೨೮೦	೬೨
೫	ಧಾರವಾಡ	೭೯	೧೩೪	೪
೬	ಬೆಳಗಾಂ	೧೫೧	೧೫	೯
೭	ಬಿಜಾಪುರ	೧	೭	೧
೮	ಶಿವಮೊಗ್ಗ	೬೩೦	೪೦೦	೮೯
೯	ಚಿಕ್ಕಮಂಗಳೂರು	೧೩	೨೬	೭೯
೧೦	ಮೈಸೂರು	೬೨	೮	೬
೧೧	ಮಂಡ್ಯ	೨	...	೪
೧೨	ಕೊಡಗು	೭೩	೧೦೨	೯೨
೧೩	ದಕ್ಷಿಣ ಕನ್ನಡ	೪೦	೮೮	೮೮
೧೪	ಹಾಸನ	೨೦೫	೧೦೯	೭೮
೧೫	ಬಳ್ಳಾರಿ	೧೮	೧೬	೭
೧೬	ಚಿತ್ರದುರ್ಗ	೪	೫	೧
೧೭	ರಾಯಚೂರು	...	೪	೨
೧೮	ತುಮಕೂರು	೧೩೦	೭೭	೫೭
೧೯	ಗುಲ್ಬರ್ಗ	...	...	೧೭
೨೦	ಬೀದರ್	...	...	...
	ಒಟ್ಟು ...	೨೦೧೨	೧೯೫೭	೨೬೫೭

ಶ್ರೀ ಬಿ. ರಾಜಶೇಖರಮೂರ್ತಿ.—ಅಧ್ಯಕ್ಷರೇ ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಸುಮಾರು ಏಳೂವರೆ ಕೋಟಿ ರೂ. ಮೌಲ್ಯದ ಕಳ್ಳಸಾಗಾಣಿಕೆ ಗಂಧವನ್ನು ವಶಪಡಿಸಿಕೊಳ್ಳಲಾಗಿದೆ. ರಾಜ್ಯದಲ್ಲಿ ಉತ್ಪಾದನೆಯಾಗುತ್ತಿರುವ ಗಂಧದಲ್ಲಿ ಎಷ್ಟು ಅಂಶದಷ್ಟು ಗಂಧದ ಮರಗಳು ಕಳುವಾಗಿದೆ ಎಂಬುದನ್ನು ತಿಳಿಸುತ್ತೀರಾ ? ಹಾಗೂ ಸರ್ಕಾರದ ಗಂಧದ ಕೋಟೆಗೆ ಉತ್ಪಾದನೆಗಾದ ಗಂಧದಲ್ಲಿ ಎಷ್ಟು ಪ್ರಮಾಣ ದಷ್ಟು ಮರಗಳು ಸೇರಿವೆ ? ನನಗೆ ಆಶ್ಚರ್ಯವೆಂದರೆ ಮೊದಲ ವರ್ಷ ೧ ಕೋಟಿ ಎರಡನೇ ವರ್ಷ ಮೂರೂವರೆ ಕೋಟಿ ಬೆಲೆ ಬಾಳುವ ಗಂಧವನ್ನು ವಶಪಡಿಸಿಕೊಂಡಿದ್ದಾರೆ. ಇಲಾಖೆಯಲ್ಲಿ ಸಿಬ್ಬಂದಿಗೆ ಆಧುನಿಕ ಸಲಕರಣೆಗಳನ್ನು ಕೊಟ್ಟಿರೂ ಈ ಕಳ್ಳತನ ತಡೆಗಟ್ಟುವುದರಲ್ಲಿ ಏಕೆ ವಿಫಲರಾಗಿದ್ದಾರೆ ? ಇದರಲ್ಲಿ ಅಧಿಕಾರಿಗಳೇನಾದರೂ ಶಾಮೀಲು ಆಗಿದ್ದಾರಾ ? ದಯಮಾಡಿ ತಿಳಿಸಿ.

ಶ್ರೀ ಬಿ. ರಾಚಯ್ಯ.—೧೯೮೬-೮೭ರಲ್ಲಿ ೧ ಕೋಟಿ ೯೫ ಸಾವಿರ ರೂಪಾಯಿ ಮೌಲ್ಯ ವಶಪಡಿಸಿಕೊಂಡಿದ್ದು, ೧೯೮೭-೮೮ರಲ್ಲಿ ೩ ಕೋಟಿ ೬೦ ಲಕ್ಷ ರೂಪಾಯಿ ಮೌಲ್ಯ ವಶಪಡಿಸಿಕೊಂಡಿದ್ದೇವೆ. ಹಾಗೂ ೧೯೮೮-೮೯ರಲ್ಲಿ ೧ ಕೋಟಿ ೬೮ ಲಕ್ಷ ರೂಪಾಯಿ ಮೌಲ್ಯ ವಶಪಡಿಸಿಕೊಂಡಿದ್ದೇವೆ. ಅಂದ ಮೇಲೆ ಈ ಮೂರು ವರ್ಷಗಳಲ್ಲಿ ಲೆಕ್ಕ ನೋಡಿದರೆ ಕೊನೇ ವರ್ಷ ಕಳ್ಳಸಾಗಾಣಿಕೆ ಕಡಿಮೆ ಆಗಿದೆ ಎಂಬುದನ್ನು ತಾವು ಒಪ್ಪಿಕೊಳ್ಳುತ್ತೀರಿ ಎಂದು ಕಾಣುತ್ತದೆ. ಕಳ್ಳಸಾಗಾಣಿಕೆ ಪ್ರೋತ್ಸಾಹ ಕೊಡುವ ಜನ ಹೆಚ್ಚಾಗಿ ಸಮಾಜದಲ್ಲಿ ಎಷ್ಟು ಇರುತ್ತಾರೋ ಅಲ್ಲಿಯವರೆಗೆ ಇದು ಪಡೆಯುತ್ತಿರುತ್ತದೆ. ಇದನ್ನು ಬಂದ್ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ, ಸಿಬ್ಬಂದಿವರ್ಗ ತಮ್ಮ ಪ್ರಾಣವನ್ನು

ಲೆಕ್ಕಿಸದೇ ಎಷ್ಟೇ ಪ್ರಯತ್ನ ಮಾಡಿದರೂ ಸಮಾಜದಲ್ಲಿ ಸ್ವಲ್ಪಮಟ್ಟಿಗೆ ಅವರಿಗೆ ಬೆಂಬಲ ಕೊಡಬೇಕಾಗುತ್ತದೆ. ಆದ್ಯಷ್ಟಿಯಿಂದ ತಮ್ಮ ಸಹಕಾರವನ್ನು ಕೇಳುತ್ತಿದ್ದೇನೆ. ಸಿಬ್ಬಂದಿವರ್ಗಕ್ಕೆ ವಾಹನ ಸೌಕರ್ಯ ಮುದ್ದುಗುಂಡು ಕೊಟ್ಟಿದ್ದರೂ ಕಳ್ಳಸಾಗಾಣಿಕೆದಾರರು ಇವರ ಮೇಲೆ ಗುಂಡು ಹಾರಿಸಿ ಜೀವತೆಗೆದ ಎಷ್ಟೋ ಪ್ರಕರಣ ತಮಗೆ ತಿಳಿದಿದೆ. ಗಂಧದ ಮರಗಳನ್ನು ಹೊರಗೆ ಇರುವ ಅನಧಿಕೃತ ಕಾರ್ಖಾನೆಗಳಿಗೆ ಸಾಗಾಣಿಕೆ ಮಾಡುವುದು ನಡೆಯುತ್ತಿದೆ. ಮೊನ್ನೆ ಕಾಸರಗೋಡಿನಲ್ಲಿ ಗಂಧವನ್ನು ಉತಿಟ್ಟಿದ್ದ ವಿಷಯ ಪತ್ರಿಕೆಗಳಲ್ಲಿ ಬಂದಿದೆ. ಕಳ್ಳಸಾಗಾಣಿಕೆ ತಡೆಗಟ್ಟಲು ರೈತರ ಹೊಲದಲ್ಲಿ ಬೆಳೆದ ಗಂಧದ ಮರಗಳಿಗೂ ೯೦ ಭಾಗದಷ್ಟು ಹಣವನ್ನು ಅವರಿಗೆ ಕೊಡುವ ವ್ಯವಸ್ಥೆಯನ್ನು ಕೂಡಾ ಮಾಡಿದ್ದೇವೆ. ಕಳ್ಳಸಾಗಾಣಿಕೆ ತಡೆಯಲು ಸಿಬ್ಬಂದಿಗಳ ಕರ್ತವ್ಯದ ಜೊತೆ ಸಾರ್ವಜನಿಕರ, ತಮ್ಮೋಥಹಪರ ಸಹಕಾರವೂ ಬೇಕಾಗುತ್ತದೆ ಎಂದು ಹೇಳುತ್ತೇನೆ.

ಶ್ರೀ ಬಿ. ರಾಜುಗೌಡ.—ಈ ಸದನವನ್ನು ಸಚಿವರು ತಪ್ಪುದಾರಿಗೆ ಎಳೆಯುತ್ತಿದಾರೆ. ಸರ್ಕಾರ ಕೊಟ್ಟಿರತಕ್ಕ ಮಾಹಿತಿ ಸತ್ಯಕ್ಕೆ ದೂರವಾದುದೆಂಬುದನ್ನು ರುಜುವಾತು ಪಡಿಸುವುದಕ್ಕೆ ಇಷ್ಟ ಪಡುತ್ತೇನೆ, ರಾಯಚೂರು ಜಿಲ್ಲೆಯಲ್ಲಿ ೧೯೮೬–೮೭ನೇ ಸಾಲಿನಲ್ಲಿ ೩೫೭೦ ರೂ.ಗಳ ಮೌಲ್ಯದ ಗಂಧದ ಮಾಲನ್ನು ಪತ್ತೆಪಡಿಸಿಕೊಳ್ಳಲಾಗಿದೆ ಎಂಬುದಾಗಿ ತಿಳಿಸಿದ್ದು, ಅದಕ್ಕೆ ಸಂಬಂಧಪಟ್ಟ ಒಂದೂ ವೆಹಿಕಲ್‌ನ್ನು ಸೀಜ್ ಮಾಡಿಲ್ಲವೆಂದು ತಿಳಿಸಿದ್ದಾರೆ. ಅದೇ ರೀತಿ ೧೯೮೭–೮೮ನೇ ಸಾಲಿನಲ್ಲಿ ಅಲ್ಲಿ ಕಳ್ಳಸಾಗಾಣಿಕೆ ಆಗಿಲ್ಲವೆಂದು ಹೇಳಿ ೨ ವಹಿಕಲ್‌ಗಳನ್ನು ಹಿಡಿದಿದ್ದೇವೆಂದು ಹೇಳಿದ್ದಾರೆ. ಇದು ಸತ್ಯಕ್ಕೆ ದೂರವಾದುದಲ್ಲವೆ ? ಇಲಾಖೆಯಿಂ ಸಿಬ್ಬಂದಿ ಎಷ್ಟು ಪ್ರಕರಣದಲ್ಲಿ ಶಾಮೀಲಾಗಿದ್ದಾರೆ ಎಂಬುದೇ ನನ್ನ ಪ್ರಶ್ನೆ ಅದಕ್ಕೆ ಉತ್ತರ ಹೇಳಿ.

ಶ್ರೀ ಬಿ. ರಾಚಯ್ಯ.—ಗಂಧದ ಮರ ಕಳ್ಳಸಾಗಾಣಿಕೆಯ ಬಗ್ಗೆ ಮಾತ್ರ ಆ ರೀತಿ ಹೇಳಲಾಗಿದೆ. ಆದರಜೊತೆಗೆ ಬೇರೆ ಕಳ್ಳಸಾಗಾಣಿಕೆಯಲ್ಲಿ ವಹಿಕಲ್‌ಗಳನ್ನು ಹಿಡಿದಿರುವುದನ್ನೂ ಕೂಡ ತಿಳಿಸಲಾಗಿದೆ.

ಉರವೆ ಕಟ್ಟಿಗೆಯ ಸರಬರಾಜು

೪೪೬. ಶ್ರೀ ಡಿ. ಎ. ಚಿನ್ನಪ್ಪ (ಮರಕೆರಾ).—ಮಾನ್ಯ ವ್ಯವಸಾಯ ಹಾಗೂ ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಅರಣ್ಯ ಇಲಾಖೆಯವರು ಸಾರ್ವಜನಿಕರಿಗೆ ಸೌದೆಯನ್ನು ಕಡಿಮೆ ದರದಲ್ಲಿ ಮಾರಾಟ ಮಾಡುತ್ತಿರುವುದು ನಿಜವೆ.

ಆ) ಹಾಗಿದ್ದರೆ ಈ ಪದ್ಧತಿಯನ್ನು ರಾಜ್ಯದ ಉಳಿದ ಜಿಲ್ಲೆಗಳಿಗೂ ಅನ್ವಯಿಸಲಾಗುವುದೇ.

ಇ) ಉತ್ತರ ಕನ್ನಡ ಜಿಲ್ಲೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ಟನ್ ಸೌದೆಯ ದರವೇನು.

ಈ) ೧೯೮೬–೮೭ನೇ ಮತ್ತು ೧೯೮೭ ೧೯೮೮ನೇ ಸಾಲಿನಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಮತ್ತು ಕೊಡಗು ಜಿಲ್ಲೆಯಲ್ಲಿಸರಬರಾಜು ಮಾಡಿದ ಸೌದೆಯ ಪ್ರಮಾಣ.

ಶ್ರೀ ಬಿ. ರಾಚಯ್ಯ (ವ್ಯವಸಾಯ ಮತ್ತು ಅರಣ್ಯ ಮಂತ್ರಿಗಳು).—

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಹೆಚ್ಚು ಅರಣ್ಯ ಪ್ರದೇಶದಿದ್ದು, ಸೌದೆ ಸಂಗ್ರಹಿಸುವ ಖರ್ಚು ಕಡಿಮೆ ಇರುವುದರಿಂದ ಸಾರ್ವಜನಿಕರಿಗೆ ಸೌದೆ ಮಾರಾಟ ದರ ಕಡಿಮೆ ಇದೆ.

ಆ) ಉಳಿದ ಪ್ರದೇಶಗಳಲ್ಲಿ ಹೆಚ್ಚು ಪ್ರಮಾಣದ ಅರಣ್ಯವಿಲ್ಲವಾದ್ದರಿಂದ ಸೌದೆ ತಯಾರಿಕೆ ಮತ್ತು ಸಾಗಾಣಿಕೆಗೆ ಹೆಚ್ಚು ಖರ್ಚು ತಗಲುವುದರಿಂದ, ಸೌದೆ ಮಾರಾಟ ಬೆಲೆಯನ್ನು ಉತ್ತರ ಕನ್ನಡ ಜಿಲ್ಲೆಯಲ್ಲಿರುವಂತೆ ಅನ್ವಯಿಸಲು ಸಾಧ್ಯವಿಲ್ಲ.

ಇ) ಉತ್ತರ ಕನ್ನಡ ಜಿಲ್ಲೆ ೧ ಟನ್ ಸೌದೆ ದರ ರೂ. ೧೫೦.೦೦ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಯಾ ಪ್ರದೇಶಗಳಿಗೆ ಅನುಗುಣವಾಗಿ ಒಂದು ಟನ್ ಸೌದೆ ದರ ರೂ. ೨೦೩ ರಿಂದ ರೂ. ೫೧೦ರ ವರೆಗೆ ಇದೆ.

ಈ)

ಜಿಲ್ಲೆ	೧೯೮೬–೮೭	೧೯೮೭–೮೮
ಉತ್ತರ ಕನ್ನಡ	೧,೭೬,೧೧೫ ೩೫೬	೧,೯೬,೧೭೬.೨೩೫
ಕೊಡಗು	೧೮,೧೫೯.೮೯೧	೧೧,೯೫೩.೦೭೩